ಮೆಮೋರಿಯಲ್ ಆಸ್ಪತ್ರೆಗೆ ಹೀಗೇ ಒಂದು ಒಂದೂವರೆ ವರ್ಷಗಳ ಕಾಲ ತಿರುಗಾಡಿದ ಭಾವೇಶ್ ಅವರಿಗೆ ಬಡತನ ಮತ್ತು ಅನಾರೋಗ್ಯದ ಕಷ್ಟಗಳೇನೆಂದು ಅನುಭವಕ್ಕೆ ಬಂದಿತ್ತು. ದಿಟವಾಗಿ ಸಂಘರ್ಷದ ದಿನಗಳು ಇವು. ತಮ್ಮ ಕುರುಡುತನದ ಸಮಸ್ಯೆಯನ್ನು ಅವರು ಮೀರಿದ್ದರು. ಆದರೆ ಕೈಯಲ್ಲಿ ಕಾಸಿಲ್ಲದ ಸ್ಥಿತಿ. ತಂದೆಗೆ ಸ್ಕಿಜೊಫ್ರೇನಿಯಾ, ತಾಯಿಗೆ ಕ್ಯಾನ್ಸರ್. ತಮ್ಮ ವಿದ್ಯಾಭ್ಯಾಸ ಮುಗಿದಿಲ್ಲ. ಕೈಯಲ್ಲಿ ಕೆಲಸವಿಲ್ಲ. ತಾಯಿಯನ್ನು ಉಳಿಸಿಕೊಳ್ಳುವುದೊಂದೇ ಅವರ ಗುರಿಯಾಗಿತ್ತು.

ಮೊದಲ ಆರು ಕೀಮೊ ಕೊಟ್ಟಮೇಲೆ ಅಮ್ಮನಿಗೆ ಸ್ವಲ್ಪ ಸುಧಾರಣೆ ಆದಂತೆ ಅನಿಸಿತು. ಆದರೆ ಮತ್ತೆ ಆರೋಗ್ಯ ಕೆಟ್ಟು ನಿಂತಾಗ, ವೈದ್ಯರು 35 ಕೀಮೊ ಕೊಡಬೇಕೆಂದು ನಿರ್ಧರಿಸಿದರು. ಅದಕ್ಕಾಗುವ ಹಣವನ್ನು ಒಂದು ಚೀಟಿಯಲ್ಲಿ ಬರೆದು ಕೊಟ್ಟರು. ಮೊದಲ ಆರು ಕೀಮೊ ಚಿಕಿತ್ಸೆ 40,000 ರೂಪಾಯಿಗಳಲ್ಲಿ ಮುಗಿದಿತ್ತು. ಆ ಹಣವನ್ನು ಹೆಚ್ಚು ಕಷ್ಟವಿಲ್ಲದೆ ಕೂಡಿಸಲು ಸಾಧ್ಯವಾಗಿತ್ತು. ಈಗ ವೈದ್ಯರ ಹೊಸ ಚಿಕಿತ್ಸೆಯ ವಿವರಣೆ ಮತ್ತು ತಗುಲುವ ಖರ್ಚನ್ನು ಬರೆದದ್ದ ಚೀಟಿ ಕೈಗೆ ಬಂದಾಗ, ಅಲ್ಲೇ ಕುಳಿತಿದ್ದ ವಾರ್ಡ್‌ಬಾಯ್ ಹತ್ತಿರ ಅದನ್ನು ಭಾವೇಶ್ ಓದಿಸಿದರು. ಆತ ಹೇಳಿದ 'ಒಂದು ಇಂಜೆಕ್ಷನ್‌ಗೆ 4,950 ರೂಪಾಯಿ'. ಅಂದರೆ ಒಟ್ಟು ಸುಮಾರು ಒಂದೂವರೆಎರಡು ಲಕ್ಷ ರೂಪಾಯಿ ಚಿಕಿತ್ಸೆಗೆ ಬೇಕಿತ್ತು. ಅದನ್ನೂ ನಾವು ಹೇಗಾದರೂ ಕೂಡಿಸಬಲ್ಲೆವು ಎಂಬ ಭರವಸೆ ಭಾವೇಶ್‌ಗೆ ಇತ್ತು.

ಆಸ್ಪತ್ರೆಯ ದಿನದಿನದ ಜಂಜಾಟಗಳಿಂದ ಪಾರಾಗಲು, ಅಲ್ಲಿಯೇ ಒಂದು ಅಕೌಂಟ್ ತೆಗೆದು, ಒಂದು ಕಾರ್ಡ್ ತೆಗೆದುಕೊಂಡಿದ್ದರು. ಅದರಲ್ಲಿ ಸುಮಾರು 15ರಿಂದ 17 ಸಾವಿರ ರೂಪಾಯಿಗಳನ್ನು ಜಮೆ ಮಾಡಿದ್ದರು. ಆ ಕಾರ್ಡ್‌ನ ನಂಬರ್ ಭಾವೇಶ್ ಅವರಿಗೆ ಇಂದಿಗೂ ನೆನಪಿದೆ ಬಿ.ಆರ್. 18693. ಇದೇ ನಂಬರನ್ನು ರೋಗಿಯ ಫೈಲ್‌ಗೆ ಕೂಡಾ ಕೊಟ್ಟಿರುತ್ತಿದ್ದರು. ಆಸ್ಪತ್ರೆಯಲ್ಲಿ ಯಾವುದೇ ಜಾಗದಲ್ಲಿ ಕಾರ್ಡ್ ಪಂಚ್ ಮಾಡಿದಾಗ, ಅದರಲ್ಲಿ ಎಷ್ಟು ಹಣವಿದೆ ಎನ್ನುವುದು ತಿಳಿಯುತ್ತಿತ್ತು. ಜೊತೆಗೇ ರೋಗಿಯ ಎಲ್ಲ ವಿವರಗಳೂ ಅದರ ಮೂಲಕ ಕಂಪ್ಯೂಟರಿನ ಫಲಕದಲ್ಲಿ ಕಾಣಿಸುತ್ತಿತ್ತು.

ಅಂದು ಭಾವೇಶ್ ಆಸ್ಪತ್ರೆಯ ಮೆಡಿಕಲ್ ಸ್ಟೋರ್‌ಗೆ ಹೊಸದಾಗಿ ಬರೆದುಕೊಟ್ಟ ಇಂಜೆಕ್ಷನ್ ತರಲು ಹೋದಾಗ, ಸ್ಟೋರಿನವ ಕಾರ್ಡ್ ಪಂಚ್ ಮಾಡಿ 'ನಿಮಗೆ ಇಂಜೆಕ್ಷನ್ ಕೊಡಲು ಸಾಧ್ಯವಿಲ್ಲ, ಕಾರಣ ಕಾರ್ಡ್‌ನಲ್ಲಿ ಅಷ್ಟು ಹಣವಿಲ್ಲ' ಎಂದರು. ಭಾವೇಶ್ ಅಚ್ಚರಿಯಿಂದ, 'ಅರೆ ಹಣವಿದೆ ನೋಡಿ. ಒಂದು ಇಂಜೆಕ್ಷನ್‌ಗೆ 4950 ರೂಪಾಯಿಯಂತೆ, ಮೂರು ಇಂಜೆಕ್ಷನ್ ಆದರೂ ನನ್ನ ಕಾರ್ಡ್‌ನಲ್ಲಿರುವ ಹಣದಿಂದ ಬರುತ್ತದಲ್ಲ. ಹಣ ಇಲ್ಲ ಎಂದು ಹೇಗೆ ಹೇಳುತ್ತಿದ್ದೀರ?' ಕೇಳಿದರು. ಆಗ ಆ ಮೆಡಿಕಲ್ ಸ್ಟೋರಿನ ಕಿಟಕಿಯ ಒಳಗಿದ್ದ ವ್ಯಕ್ತಿ, ಸಮಾಧಾನವಾಗಿ ವಿವರಿಸಿದ. 'ಒಂದು ಇಂಜೆಕ್ಷನ್‌ಗೆ 4950 ರೂಪಾಯಿ ಅಲ್ಲ, 49,500 ರೂಪಾಯಿ'. ಭಾವೇಶ್ ಅವರ ಕಾಲ ಕೆಳಗಿಂದ ನೆಲ ಕುಸಿದಿತ್ತು. ಆಗ ಅವರಿಗೆ ಅರಿವಾಯಿತು, ಆ ವಾರ್ಡ್ ಬಾಯ್ ಒಂದು ಸೊನ್ನೆಯನ್ನು ಓದುವುದು ಮರೆತಿದ್ದ, ಇಲ್ಲ ತಪ್ಪಾಗಿ ಓದಿದ್ದ. ಒಂದು ಇಂಜೆಕ್ಷನ್‌ಗೆ 49,500 ರೂಪಾಯಿ ಆದರೆ 35 ಇಂಜೆಕ್ಷನ್‌ಗಳಿಗೆ ಸುಮಾರು 17.5 ಲಕ್ಷ ರೂಪಾಯಿಗಳು ಬೇಕು! ಅಷ್ಟು ಹಣವನ್ನು ಎಲ್ಲಿಂದ ತರುವುದು? ಈ ಕಾಲಕ್ಕೇ ಅದು ದೊಡ್ಡ ಮೊತ್ತ. ಇನ್ನು 1990ರ ದಶಕದ ಆರಂಭದ ವರ್ಷಗಳಲ್ಲಿ 17.5 ಲಕ್ಷ ರೂಪಾಯಿ ಎಷ್ಟು ದೊಡ್ಡ ಮೊತ್ತವಾಗಿತ್ತು, ಊಹಿಸಿಕೊಳ್ಳಬಹುದು. ಅದಲ್ಲದೆ, ಇದು 35 ಇಂಜೆಕ್ಷನ್‌ಗಳ ಮಾತಷ್ಟೇ ಆಗಿರಲಿಲ್ಲ. ಮಹಾಬಲೇಶ್ವರದಿಂದ ಬಾಂಬೆಗೆ ಬಂದು ಹೋಗುವ ಖರ್ಚು, ರಕ್ತ ಪರೀಕ್ಷೆಯ ವೆಚ್ಚ, ಆಸ್ಪತ್ರೆಯ ಡೇಕೇರ್‌ನ ಬಾಡಿಗೆ, ಇವೆಲ್ಲವುಗಳ ಜೊತೆಗೆ ಕೊಡಬೇಕಾದ ಇತರ ದುಬಾರಿಯ ಔಷಧಿಗಳು. ಇಷ್ಟೆಲ್ಲಕ್ಕೂ ಬೇಕಾದ ಹಣವನ್ನು ಎಲ್ಲಿಂದ ತರುವುದು? ಭಾವೇಶ್ ತಮ್ಮ ಓರ್ವ ಮಾಮನಿಗೆ ಫೋನ್ ಮಾಡಿದರು. ಆ ದಿನದ ಒಂದು ಇಂಜೆಕ್ಷನ್ ಕೊಳ್ಳಲು ಬೇಕಿದ್ದ ಉಳಿದ ಹಣವನ್ನು ತರಿಸಿಕೊಂಡರು. ಅಮ್ಮನ ಚಿಕ್ಕಪ್ಪನ ಮಗ, ಟ್ಯಾಕ್ಸಿಯಲ್ಲಿ ಹಣದೊಂದಿಗೆ ಎಷ್ಟು ಬೇಗ ಆಗುತ್ತೋ ಅಷ್ಟು ಬೇಗ ಬಂದು ತಲುಪಿದರು.

ಆ ದಿನದ ಕೀಮೊಗೆ ಬೇಕಾದ ಹಣ ಒದಗಿತ್ತು. ಆದರೆ ಎರಡನೇ ಬಾರಿ ಇಂಜೆಕ್ಷನ್ ಖರೀದಿಸುವ ಸಮಯ ಬಂದಾಗ, ಸ್ನೇಹ ಸಂಬಂಧಗಳು ಹಣದ ಅಭಾವದಲ್ಲಿ ಕರಗುವುದನ್ನು ಕಂಡರು. ಕಂಡ ಕಂಡವರಲ್ಲಿ ಸಹಾಯ ಬೇಡುವ ಸ್ಥಿತಿ. ಬಹಳಷ್ಟು ಜನ, ಒಂದಲ್ಲ ಒಂದು ನೆಪ ಹೇಳಿ ತಪ್ಪಿಸಿಕೊಳ್ಳಲು ಬಯಸಿದರು. ಅವರೆಲ್ಲರಲ್ಲೂ ಭಾವೇಶ್‌ನದ್ದು ಒಂದೇ ಪ್ರಾರ್ಥನೆ. 'ನನಗೆ ಸಾಲವಾಗಿ ಕೊಡಿ. ಖಂಡಿತಾ ಮುಂದೆ ತೀರಿಸುತ್ತೇನೆ'. ಸಾಲ ಅಷ್ಟು ಸುಲಭವಾಗಿ ಸಿಗುತ್ತಿರಲಿಲ್ಲ. ಹಣದ ಮೊತ್ತ ಕೂಡಾ ಆ ಕಾಲಕ್ಕೆ ಬಲು ದೊಡ್ಡದಿತ್ತು. ಒಬ್ಬೊಬ್ಬರದು ಒಂದೊಂದು ಮಾತು. 'ಅರೆ ಯೋಚಿಸಬೇಡ. ನಾವು ಪ್ರಧಾನ ಮಂತ್ರಿಯವರಿಗೆ ಪತ್ರ ಬರೆಯೋಣ. ಇಲ್ಲ ಈ ಮಂತ್ರಿಗೆ ಬರೆಯೋಣ' ಹೀಗೇನೋ ಆಗದ ಮಾತುಗಳನ್ನು ಹೇಳುವರು. ಪ್ರಧಾನ ಮಂತ್ರಿಯಿಂದ ಉತ್ತರ ಬರುವವರೆಗೆ ಅಮ್ಮನ ಜೀವವನ್ನು ಹಿಡಿದಿಡುವುದು ಹೇಗೆ? 'ಶಿರಡಿ ಟ್ರಸ್ಟ್ ಬಳಿಗೆ ಹೋಗೋಣ' ಇನ್ನೊಬ್ಬರ ಸಲಹೆ. ಪ್ರತಿಯೊಬ್ಬರೂ ತಮ್ಮ ಕಿಸೆಯಿಂದ ಖರ್ಚಾಗದಂತೆ ತಮ್ಮನ್ನು ತಾವು ಬಚಾವು ಮಾಡಿಕೊಳ್ಳುವ ಮಾರ್ಗಗಳನ್ನು ಹೇಳುತ್ತಿದ್ದರು. ಅವರ ಸುಳ್ಳು ಆಶ್ವಾಸನೆಗಳು, ಪೊಳ್ಳು ನೆಪಗಳು, ಕನ್ನಡಿಯಲ್ಲಿ ತೋರಿಸುವ ಗಂಟುಗಳು ಭಾವೇಶ್ ಅವರನ್ನು ಗಾಸಿಗೊಳಿಸಿತ್ತು. ಅತ್ಯಂತ ಅಸಹಾಯಕ ಸ್ಥಿತಿ. ಪ್ರೀತಿಯ ಅಮ್ಮನನ್ನು ಉಳಿಸಿಕೊಳ್ಳುವುದು ಹೇಗೆ? ವೈದ್ಯರು ಹೇಳಿರುವ ಸಂಜೀವಿನಿಗೆ ಲಕ್ಷ ಲಕ್ಷ ಹಣವಾದರೂ ಚಿಂತೆಯಿಲ್ಲ. ತಾನದನ್ನು ಒದಗಿಸಬೇಕು. ಅಮ್ಮನನ್ನು ಬದುಕಿಸಿಕೊಳ್ಳಬೇಕು ಭಾವೇಶ್ ಅವರ ನಿಶ್ಚಿತದ ನಿರ್ಧಾರ.

ಕೊನೆಗೆ ತಂದೆಗೆ ಎಲ್ಲವನ್ನೂ ಹೇಳಿದರು. ಮೊದಲಿಗೆ ಆರು ಕೀಮೊ ಆಗುವವರೆಗೂ 'ತಾಯಿಗೆ ಕ್ಯಾನ್ಸರ್ ಇದೆ' ಎಂದು ಕೂಡಾ ಅಪ್ಪನಿಗೆ ತಿಳಿಸಿರಲಿಲ್ಲ. ಕಾರಣ, ಈಗಷ್ಟೇ ಒಂದಿಷ್ಟು ಸುಧಾರಿಸುತ್ತಿರುವ ಅವರ ಮಾನಸಿಕ ಆರೋಗ್ಯ ಮತ್ತೆ ಕೆಟ್ಟರೆ, ಅವರನ್ನು ಸಂಭಾಳಿಸುವುದು ಹೇಗೆ? ಮೊದಲೇ ಮಾನಸಿಕವಾಗಿ ಬಹಳಷ್ಟು ನಲುಗಿ ಹೋಗಿದ್ದ ಜೀವ. ಅಮ್ಮನ ಕ್ಯಾನ್ಸರ್ ರೋಗ ಮತ್ತು ಚಿಕಿತ್ಸೆಗೆ ಬೇಕಾದ ಹಣದ ಅಭಾವದ ಬಗ್ಗೆ ತಿಳಿಸಿ ಮತ್ತಷ್ಟು ಅವರನ್ನು ಗಾಸಿಗೊಳಿಸಲು ಭಾವೇಶ್ ಬಯಸಿರಲಿಲ್ಲ. ಆದರೆ ಈಗ ತಂದೆಗೆ ಪರಿಸ್ಥಿತಿಯನ್ನು ವಿವರಿಸದೆ ಬೇರೆ ದಾರಿ ಇರಲಿಲ್ಲ. ಮನಸ್ಸನ್ನು ಗಟ್ಟಿ ಮಾಡಿ, ಸಾವಧಾನವಾಗಿ ತಂದೆಗೆ ಎಲ್ಲವನ್ನೂ ತಿಳಿಸಿದರು. ತಂದೆ ಟ್ರಸ್ಟ್‌ನಿಂದ ಏನಾದರೂ ಹಣ ಸಿಗಬಹುದೆ ಪ್ರಯತ್ನಿಸಿದರು. ಟ್ರಸ್ಟ್ ಹಣ ಕೊಡಲು ನಿರಾಕರಿಸಿತು. ಈಗ ಭಾವೇಶ್ ಮತ್ತು ತಂದೆ, ಅವರು ಕೊಂಡಿದ್ದ ಜಮೀನನ್ನು ಮಾರಲು ನಿರ್ಧರಿಸಿದರು. ತಾಯಿಯನ್ನು ಉಳಿಸಿಕೊಳ್ಳುವುದು ಅವರ ಎಲ್ಲಕ್ಕೂ ಮೀರಿದ ಆದ್ಯತೆಯಾಗಿತ್ತು.

ಸಿಕ್ಕಷ್ಟು ಹಣಕ್ಕೆ, ತುರ್ತಾಗಿ ಮಾರಾಟ ಮಾಡಬೇಕಿತ್ತು. ಸಮಯವಿರಲಿಲ್ಲ. ಒಂದು ಎಕರೆಗೆ ಒಂದು ಲಕ್ಷದ ಹಾಗೆ ಆ ಇಡೀ ಜಮೀನಿಗೆ 12 ಲಕ್ಷ ಪಡೆದು, ಹಣವನ್ನು ಜಮೆ ಮಾಡಿದರು. ಇದು ಎಷ್ಟು ಕಾಲ ಅಮ್ಮನ ಜೀವವನ್ನು ಉಳಿಸುತ್ತದೆ ಗೊತ್ತಿರಲಿಲ್ಲ. ಅಮ್ಮನ ಪ್ರಾಣದ ಎದುರು ಮತ್ತೆಲ್ಲವೂ ಗೌಣವಾಗಿತ್ತು. ಅಂತಹ ಸ್ಥಿತಿ ಬಂದರೆ, ಭಾವೇಶ್ ತಮ್ಮ ಒಂದು ಮೂತ್ರಪಿಂಡವನ್ನು ಮಾರಲೂ ಸಿದ್ಧರಾಗಿದ್ದರು!

ಜಮೀನು ಮಾರಾಟದಿಂದ ಬಂದ ಹಣದಿಂದ ಹೊಸ ಔಷಧಿಯ ಕೀಮೊ ಚಿಕಿತ್ಸೆ ಮುಂದುವರೆಯಿತು. ಕೀಮೊ ಇಂಜೆಕ್ಷನ್‌ನ ಖರ್ಚೇ ಒಂದಕ್ಕೆ ಸುಮಾರು 50,000 ರೂಪಾಯಿ ಆಗುತ್ತಿತ್ತು. ಅದರೊಡನೆ, ಉಳಿದೆಲ್ಲ ಖರ್ಚುಗಳನ್ನು ಕೂಡಿದಾಗ, ಒಂದು ಕೀಮೊ ಕೊಡಿಸುವ ಖರ್ಚು 60ರಿಂದ 65 ಸಾವಿರವಾಗುತ್ತಿತ್ತು. ಯಾರದೋ ಸಲಹೆ ಕೇಳಿ, ಭಾವೇಶ್ ದಕ್ಷಿಣ ಮುಂಬಯಿಯ 'ಕಾಲಾ ಘೋಡಾ' ಜಾಗದ ಬಳಿ ಇದ್ದ 'ಬಾಂಬೆ ಡೈಯಿಂಗ್ ಟ್ರಸ್ಟ್'ನ ಕಾರ್ಯಾಲಯವನ್ನು ಒಂದಿಷ್ಟು ಆರ್ಥಿಕ ಸಹಾಯ ಬೇಡಲು ಹುಡುಕಿ ಹೋದರು. ಒಂದೊಂದು ಇಂಜೆಕ್ಷನ್ ಅನ್ನು ಅಮ್ಮನಿಗೆ ಕೊಡಿಸಲು ಆಕಾಶ ಭೂಮಿ ಒಂದು ಮಾಡಲು ಭಾವೇಶ್ ಸಿದ್ಧರಿದ್ದರು. ಆ ಟ್ರಸ್ಟ್‌ಗೆ ಬೇಕಿದ್ದ ಕಾಗದ ಪತ್ರಗಳನ್ನೆಲ್ಲ ಜೊತೆಗೆ ತೆಗೆದುಕೊಂಡು ಹೋಗಿದ್ದರು. ಅವರ ವಾರ್ಷಿಕ ಆದಾಯ, ಟಾಟಾ ಆಸ್ಪತ್ರೆಯ ರೋಗದ ವಿವರಣೆಗಳಿದ್ದ ಪ್ರಮಾಣ ಪತ್ರ, ಹಾಗೆಯೇ ಸಮಾಜ ಸೇವಕರೊಬ್ಬರ ಶಿಫಾರಸ್ಸು ಪತ್ರ ಎಲ್ಲವನ್ನೂ ಜೊತೆಗೆ ಕೊಂಡೊಯ್ದಿದ್ದರು. ಫೈಲ್ ಎಷ್ಟು ದೊಡ್ಡದಾಗಿತ್ತು ಎಂದರೆ ಕೆಲವು ಪತ್ರಗಳನ್ನು ಫೈಲ್ ಒಳಗೆ ಹಾಕಲು ಸಾಧ್ಯವಾಗಿರಲಿಲ್ಲ.

ಫೈಲ್ ಅನ್ನು ಟ್ರಸ್ಟಿನ ಮಹೋದಯರ ಎದುರಿಗೆ ಇಟ್ಟರು. ಫೈಲ್ ಮಾಡದೆ ಉಳಿದ ಕಾಗದಗಳ ಕಂತೆ